# ಕೃತಜ್ಞತೆಗಳು....

ಸಂಶೋಧನೆಯ ನನ್ನ ಹಂಬಲಕ್ಕೆ ಬೆಂಬಲವಿತ್ತು ಮಾರ್ಗದರ್ಶನ ಮಾಡಿದವರು ನನ್ನ ಗುರುಗಳು ಮತ್ತು ಕನ್ನಡ ಭಾರತಿಯ ಪ್ರಾಧ್ಯಾಪಕರಾದ ಡಾ. ಸಣ್ಣರಾಮ ಅವರು. ಕಾಲಕಾಲಕ್ಕೆ ಬದಲಾದ ಆಲೋಚನಾ ಕ್ರಮ ಮತ್ತು ಹೊಸ ಬಗೆಯ ಚಿಂತನೆಗಳನ್ನು ಸೂಚಿಸಿ ಸಂಶೋಧನೆ ಸುಗಮವಾಗಲು ಹಾಗೂ ಈ ಸಂಶೋಧನಾ ಮಹಾಪ್ರಬಂಧವನ್ನು ಸಮಕಾಲೀನ ಚರ್ಚೆಯನ್ನಾಗಿ ರೂಪಿಸಲು ಮಾರ್ಗದರ್ಶನ ನೀಡಿದ ಡಾ. ಸಣ್ಣರಾಮ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕನ್ನಡ ವಿಭಾಗಕ್ಕೆ ಭೇಟಿ ನೀಡಿದಾಗೆಲ್ಲ ಆತ್ಮೀಯತೆಯಿಂದ ಮಾತನಾಡಿಸಿ, ಸಂಶೋಧನೆ ಯಾವ ಹಂತದಲ್ಲಿದೆ ಎಂದು ವಿಚಾರಿಸಿಕೊಳ್ಳುತ್ತಿದ್ದ ಪ್ರಾಧ್ಯಾಪಕರು ಮತ್ತು ಕನ್ನಡ ಭಾರತಿಯ ನಿರ್ದೇಶಕರೂ ಆಗಿರುವ ಡಾ. ಕೆ. ಕೇಶವ ಶರ್ಮ ಅವರಿಗೆ ನನ್ನ ಕೃತಜ್ಞತೆಗಳು.

ಸಂಶೋಧನೆಯ ಗುಂಗಿನಲ್ಲೇ ಹಲವು ವರ್ಷಗಳು ಕಳೆದು, ಕೊನೆಗೊಮ್ಮೆ ಸಂಶೋಧನೆಗೆ ತೊಡಗಲೇಬೇಕೆಂಬ ನನ್ನ ಒಡಲಾಳವನ್ನು ಸ್ನಾತಕೋತ್ತರ ಅಧ್ಯಯನದಲ್ಲಿ ನನ್ನ ಗುರುಗಳಾಗಿದ್ದ ಡಾ. ಸಿ.ಎಸ್. ಶಿವಕುಮಾರ ಸ್ವಾಮಿ (ಕುಮಾರ ಚಲ್ಯ), ಡಾ. ಬಸವರಾಜ ನೆಲ್ಲಿಸರ, ವಿಶ್ವವಿದ್ಯಾನಿಲಯದ ಗ್ರಂಥಪಾಲಕರಾದ ಡಾ. ಕೆ.ಸಿ. ರಾಮಕೃಷ್ಣೇಗೌಡ ಮತ್ತು ಪ್ರಾಧ್ಯಾಪಕರಾದ ಡಾ. ಜಿ. ಪ್ರಶಾಂತ ನಾಯಕರಲ್ಲಿ ಹೇಳಿಕೊಂಡಾಗ 'ಒಳ್ಳೆಯ ನಿರ್ಧಾರ ಮುಂದುವರೆಯಿರಿ' ಎಂದು ವಿಶ್ವಾಸ ಮೂಡಿಸಿ ಸೂಕ್ತ ಸಲಹೆ ಸಹಕಾರಗಳನ್ನು ನೀಡಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು. ಗ್ರಂಥಾಲಯದಲ್ಲಿ ಪರಾಮರ್ಶನಕ್ಕೆ ನೆರವು ನೀಡಿದ ಎಸ್.ಬಿ. ಬಿರಾದಾರ ಅವರಿಗೂ ನನ್ನ ಕೃತಜ್ಞತೆಗಳು.

ನನ್ನ ಸ್ನಾತಕೋತ್ತರ ಅಧ್ಯಯನ ಸಂದರ್ಭದಲ್ಲಿ ಗುರುಗಳಾಗಿದ್ದು ಆಗಲೇ ನನ್ನಲ್ಲಿ ಸಂಶೋಧನಾಸಕ್ತಿಯನ್ನು ಮೂಡಿಸಿದ್ದ ಡಾ.ಶ್ರೀಕಂಠ ಕೂಡಿಗೆ ಮತ್ತು ಡಾ. ತೀ.ನಂ.ಶಂಕರನಾರಾಯಣ ಅವರಿಗೂ ನನ್ನ ಕೃತಜ್ಞತೆಗಳು. ನನ್ನ ಸಂಶೋಧನಾ ವಿಷಯದಲ್ಲಿ ಕುತೂಹಲ ವಹಿಸಿ ನನ್ನೊಂದಿಗೆ ಚರ್ಚೆಗೆ ತೊಡಗಿಕೊಂಡಿದ್ದ ಡಾ. ರಂಗರಾಜ ವನದುರ್ಗ ಅವರಿಗೂ ನನ್ನ ಕೃತಜ್ಞತೆಗಳು.

ಸಂಶೋಧನೆಯ ಹೊಸ ಆಯಾಮಗಳ ಚರ್ಚೆಗಳೊಂದಿಗೆ ಮಾಹಿತಿ ಮತ್ತು ಗ್ರಂಥಗಳನ್ನು ನೀಡಿ ಸಹಕರಿಸಿದ ಡಾ. ಎಸ್.ಪಿ. ಪದ್ಮಪ್ರಸಾದ್, ಡಾ. ನಾ. ಡಿಸೋಜ, ಡಾ. ಪಿ. ಶಾಂತರಾಮ ಪ್ರಭು, ವಿಲಿಯಂ, ಡಾ. ರಘುನಾಥ ಎಚ್.ಎಸ್., ಡಾ. ಬಿ. ಗಣಪತಿ, ಡಾ. ಕುಂಸಿ ಉಮೇಶ್, ಡಾ. ಎಚ್.ಟಿ. ಕೃಷ್ಣಮೂರ್ತಿ, ಡಾ. ಬಿ.ಎಂ. ಜಯಶೀಲ, ಡಾ. ಕೆ. ಪ್ರಭಾಕರರಾವ್, ಡಾ. ಶುಭಾದಾಸ್, ಸಾಗರದ ರವೀಂದ್ರ ಪುಸ್ತಕಾಲಯದ ವೈ.ಎ. ದಂತಿ, ಹೊಸನಗರದ ಸಾರ್ವಜನಿಕ ಗ್ರಂಥಾಲಯದ ಗ್ರಂಥಪಾಲಕರಾದ ಅಶೋಕ ಗುಳೇದ ಮತ್ತು ಸಂಶೋಧನಾ ವಿದ್ಯಾರ್ಥಿಯಾದ ರುದ್ರೇಶ್ ವಿ.ಜಿ. ಅವರಿಗೂ ನನ್ನ ಕೃತಜ್ಞತೆಗಳು.

ಈ ಸಂಶೋಧನಾ ಕಾರ್ಯಕ್ಕೆ ಸಹಕರಿಸಿದ ನನ್ನ ಕಾಲೇಜಿನ ಕನ್ನಡ ವಿಭಾಗದ ಸಹೋದ್ಯೋಗಿಗಳಾದ ಶ್ರೀಮತಿ ಸೌಮ್ಯ ಕೆ.ಸಿ., ಶ್ರೀಮತಿ ಆರ್. ವಸುಧಾ ಚೈತನ್ಯ, ಕೆ. ಶ್ರೀಧರ, ಎಚ್.ಕೆ. ಶೈಲಜ, ಕೆ.ಎಲ್. ವೀಣಾಶ್ರೀ, ಇ.ಡಿ. ಹೇಮಾವತಿ, ಕಾಲೇಜಿನ ಪ್ರಿನ್ಸಿಪಾಲರು ಮತ್ತು ಎಲ್ಲ ವಿಭಾಗದ ಸಹೋದ್ಯೋಗಿ ಮಿತ್ರರಿಗೂ ನನ್ನ ಕೃತಜ್ಞತೆಗಳು.

ಸಂಶೋಧನಾ ಅಧ್ಯಯನಕ್ಕೆ ಒತ್ತಾಸೆಯಾದ ಬಾಳ ಸಂಗಾತಿ ಶ್ರೀಮತಿ ಎಲಿಜಬೆತ್ ಶರಾಂ, ಮಗಳಾದ ಸಿಂಧು ಸೆರಾವೊ ಮತ್ತು ಅತ್ತಿಗೆ ಮೋಂತಿ ಪ್ಲಾಸಿ ಡಿಸೋಜರಿಗೂ ನನ್ನ ಕೃತಜ್ಞತೆಗಳು.

ಸಂಶೋಧನಾ ಮಹಾಪ್ರಬಂಧವನ್ನು ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ವಾಸವಿ ಡಿ.ಟಿ.ಪಿ. ಕೇಂದ್ರದ ಕುಮಾರಿ ಪ್ರತಿಭಾ ಮತ್ತು ವಿನ್ಯಾಸಗೊಳಿಸಿದ ಎಸ್.ಜಿ.ಎಸ್. ಕಂಪ್ಯೂಟರ್ಸ್ ಇವರಿಗೆ ನನ್ನ ಕೃತಜ್ಞತೆಗಳು.

ಈ ಸಂಶೋಧನಾ ಮಹಾಪ್ರಬಂಧ ರಚನೆಗೆ ಹಲವು ವಿದ್ವಾಂಸರ ಗ್ರಂಥಗಳನ್ನು ಮತ್ತು ಲೇಖನಗಳನ್ನು ಬಳಸಿಕೊಂಡಿದ್ದೇನೆ. ಅವರೆಲ್ಲರಿಗೂ ನಾನು ಋಣಿಯಾಗಿದ್ದೇನೆ.

– *ಮಾರ್ಷಲ್ ಶರಾಂ*